355

/608456/2024

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 71 ಡಿಸಭೆ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ: 20.05.2024.

## ಸುತ್ತೋಲೆ

ವಿಧಾನಸೌಧ/ ವಿಕಾಸಸೌಧ/ ಬಹುಮಹಡಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳ ಆರೋಗ್ಯ ಹಿತದೃಷ್ಟಿಯಿಂದ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗುತ್ತಿದೆ. ಈ ಶಿಬಿರದಲ್ಲಿ ಕೆಳಕಂಡ ಆರೋಗ್ಯ ತಪಾಸಣೆ ನಡೆಸಲಾಗುವುದು.

1. Blood Investigation CBC, LFT, RFT, etc.
2. Non-Communicable diseases ವಿಭಾಗದಿಂದ ವಿವಿಧ ತಪಾಸಣೆಗಳು BP, SUGAR, CANCER, & ORAL HEALTH
3. Physician ರವರಿಂದ ವಿವಿಧ ಪರೀಕ್ಷೆ ಮತ್ತು ತಪಾಸಣೆಗಳು.
4. Cardiology ವಿಭಾಗದಿಂದ ಹೃದಯಕ್ಕೆ ಸಂಬಂಧಿಸಿದ ವಿವಿಧ ಪರೀಕ್ಷೆ ಮತ್ತು ತಪಾಸಣೆಗಳು.
5. Opthalmology Section, ಸದರಿ ವಿಭಾಗದಿಂದ ಕಣ್ಣಿನ ಪರೀಕ್ಷೆ, ತಪಾಸಣೆಗಳು.
6. Gynecology Section, ಸದರಿ ವಿಭಾಗದಿಂದ ಮಹಿಳೆಯರಿಗೆ ವಿವಿಧ ಪರೀಕ್ಷೆ ಮತ್ತು ತಪಾಸಣೆಗಳು.
7. Orthopedic Section, ಸದರಿ ವಿಭಾಗದಿಂದ ಕೀಲು ಮತ್ತು ಮೂಳೆ ಪರೀಕ್ಷೆ ತಪಾಸಣೆಗಳು.
8. Skin Department ಸದರಿ ವಿಭಾಗದಿಂದ ಚರ್ಮ ವ್ಯಾಧಿಗೆ ವಿವಿಧ ಪರೀಕ್ಷೆ ಮತ್ತು ತಪಾಸಣೆಗಳು.
9. Mental Health Department ಸದರಿ ವಿಭಾಗದಿಂದ ಮಾನಸಿಕ ನರದೌರ್ಬಲ್ಯಕ್ಕೆ ಸಂಬಂಧಿಸಿದ ವಿವಿಧ ಪರೀಕ್ಷೆ ಮತ್ತು ತಪಾಸಣೆಗಳು.

ಆರೋಗ್ಯ ಶಿಬಿರದ ಪೂರ್ವಭಾವಿಯಾಗಿ ಅಧಿಕಾರಿ/ ಸಿಬ್ಬಂದಿಗಳ ರಕ್ತ ತಪಾಸಣೆಯನ್ನು ಈ ಕೆಳಗಿನಂತೆ ನಡೆಸಲಾಗುವುದು.

ದಿನಾಂಕ: 22.05.2024 ರಿಂದ ದಿನಾಂಕ: 24.05.2024 ರವರೆಗೆ (ದಿ: 27.05.2024 Reserve Day)
ರಕ್ತ ತಪಾಸಣೆ ಸಮಯ: ಬೆಳಗ್ಗೆ 10.00 ರಿಂದ ಅಪರಾಹ್ನ 3.00 ರವರೆಗೆ

| ಕ್ರ. ಸಂ | ದಿನಾಂಕ | ಇವರಿಗೆ |
|---|---|---|
| 1. | 22.05.2024 | ವಿಧಾನಸೌಧ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳಿಗೆ |
| 2. | 23.05.2024 | ವಿಕಾಸಸೌಧ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳಿಗೆ |
| 3. | 24.05.2024 | ಬಹುಮಹಡಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳಿಗೆ |
| 4. | 27.05.2024 (Reserve Day) | ಮೇಲ್ಕಂಡ ದಿನಗಳಂದು ತಪಾಸಣೆ ಮಾಡಿಸದೇ ಬಾಕಿ ಉಳಿದ ಅಧಿಕಾರಿ/ ಸಿಬ್ಬಂದಿಗಳಿಗೆ |

ರಕ್ತ ತಪಾಸಣೆಗೆ ಪಾಲ್ಗೊಳ್ಳುವ ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ತಪ್ಪದೇ ಆಧಾರ್ ಸಂಖ್ಯೆಯೊಂದಿಗೆ ನೋಂದಣಿ ಕೇಂದ್ರದಲ್ಲಿ ನೋಂದಣಿ ಮಾಡಿಕೊಳ್ಳಬಹುದು ಅಥವಾ Abha Applications Download ಮಾಡಿಕೊಳ್ಳುವ ಮೂಲಕ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು.

ಆರೋಗ್ಯ ತಪಾಸಣೆ ಶಿಬಿರ ಆಯೋಜಿಸಲಾಗುವ ದಿನದಂದು ಎಲ್ಲಾ ಅಧಿಕಾರಿ/ ಸಿಬ್ಬಂದಿಗಳು ತಮಗೆ ನೀಡಲಾದ ರಕ್ತ ತಪಾಸಣಾ ವರದಿಯೊಂದಿಗೆ ಹಾಜರಾಗತಕ್ಕದ್ದು.

ಮೇಲ್ಕಂಡ ದಿನಾಂಕಗಳಂದು ವಿಧಾನಸೌಧ/ ವಿಕಾಸಸೌಧ/ ಬಹುಮಹಡಿ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಸರ್ಕಾರ ಸಚಿವಾಲಯ/ ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ/ ಕರ್ನಾಟಕ ವಿಧಾನ ಸಭಾ ಸಚಿವಾಲಯ /ಮಾನ್ಯ ಮುಖ್ಯ ಮಂತ್ರಿಗಳ ಸಚಿವಾಲಯ/ ಮಾನ್ಯ ಉಪ ಮುಖ್ಯಮಂತ್ರಿ ಹಾಗೂ ಮಾನ್ಯ ಸಚಿವರುಗಳ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳು ರಕ್ತ ತಪಾಸಣೆಯಲ್ಲಿ ಪಾಲ್ಗೊಂಡು ಈ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಕೋರಲಾಗಿದೆ.

608456/2024

ರಕ್ತ ತಪಾಸಣೆಗೆ ಪಾಲ್ಗೊಳ್ಳುವ ಸಲುವಾಗಿ ಮೇಲಿನ ದಿನಗಳಲ್ಲಿ ಯಾವುದಾದರೂ ಒಂದು ದಿನ ಮಾತ್ರ ಎರಡು ಗಂಟೆಗಳ ಅವಧಿಗೆ ಕಛೇರಿಯಿಂದ ಹೋಗಿ ಬರಲು ಕಾಲಾವಕಾಶ ನೀಡಲಾಗಿದೆ.

Signed by
Yadu Kumar R
Date: 20-05-2024 11:46:04
(ಆರ್. ಯದುಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಕಾರ್ಯಕಾರಿ)

**ಇವರಿಗೆ:-**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು/ ವಿಶೇಷ/ ಜಂಟಿ/ ಉಪ/ ಅಧೀನ ಕಾರ್ಯದರ್ಶಿಗಳು, ವಿಧಾನಸೌಧ/ ವಿಕಾಸಸೌಧ, ಬಹುಮಹಡಿ ಕಟ್ಟಡ.
3. ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ.
3. ಕಾರ್ಯದರ್ಶಿಗಳು, ವಿಧಾನ ಪರಿಷತ್ ಸಚಿವಾಲಯ. | ಈ ಬಗ್ಗೆ ತಮ್ಮ ಅಧೀನ ಅಧಿಕಾರಿ/ ಸಿಬ್ಬಂದಿಗಳಿಗೆ ಸೂಚನೆ ನೀಡುವಂತೆ ಕೋರಿದೆ.
4. ಕಾರ್ಯದರ್ಶಿಗಳು, ವಿಧಾನಸಭೆ ಸಚಿವಾಲಯ.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಾಗಡಿ ರಸ್ತೆ, ಬೆಂಗಳೂರು.
6. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
7. ಮಾನ್ಯ ಉಪ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
8. ಮಾನ್ಯ ವಿಧಾನ ಪರಿಷತ್ತಿನ ಸಭಾಪತಿ/ಉಪ ಸಭಾಪತಿಯವರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ.
9. ಮಾನ್ಯ ವಿಧಾನ ಸಭಾಧ್ಯಕ್ಷರು/ ಉಪ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿಯವರು, ವಿಧಾನಸೌಧ.
10. ಎಲ್ಲಾ ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳು.
11. ಉಪ ಪೊಲೀಸ್ ಆಯುಕ್ತರು, ವಿಧಾನಸೌಧ ಭದ್ರತಾ ವಿಭಾಗ, ವಿಧಾನಸೌಧ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.2, ಕಟ್ಟಡಗಳ ಉಪ ವಿಭಾಗ, ಲೋಕೋಪಯೋಗಿ ಇಲಾಖೆ, ವಿಧಾನಸೌಧ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.5, ವಿದ್ಯುತ್ ಉಪ ವಿಭಾಗ, ಲೋಕೋಪಯೋಗಿ ಇಲಾಖೆ, ವಿಧಾನಸೌಧ.
14. ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ, ವಿಧಾನಸೌಧ.
15. ಅಗ್ನಿ ಶಾಮಕ ಅಧಿಕಾರಿ, ಅಗ್ನಿ ಶಾಮಕ ಠಾಣೆ, ವಿಧಾನಸೌಧ.
16. ಭದ್ರತಾಧಿಕಾರಿ, ಸಿಆಸುಇ (ಕಾರ್ಯಕಾರಿ), ಭದ್ರತಾ ವಿಭಾಗ, ವಿಧಾನಸೌಧ.
17. ಅಧ್ಯಕ್ಷರು, ಕರ್ನಾಟಕ ಸರ್ಕಾರ ಸಚಿವಾಲಯ ನೌಕರರ ಸಂಘ, ಬಹುಮಹಡಿ ಕಟ್ಟಡ.
18. ಅಧ್ಯಕ್ಷರು, ಕರ್ನಾಟಕ ವಿಧಾನ ಪರಿಷತ್ ಸಚಿವಾಲಯ ನೌಕರರ ಸಂಘ.
19. ಅಧ್ಯಕ್ಷರು, ಕರ್ನಾಟಕ ವಿಧಾನಸಭಾ ಸಚಿವಾಲಯ ನೌಕರರ ಸಂಘ.
20. ವಿಧಾನಸೌಧ/ ವಿಕಾಸಸೌಧ/ ಬಹುಮಹಡಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ಸರ್ಕಾರ ಸಚಿವಾಲಯ/ ಮಾನ್ಯ ವಿಧಾನ ಪರಿಷತ್ ಸಚಿವಾಲಯ/ ಮಾನ್ಯ ವಿಧಾನ ಸಭಾ ಸಚಿವಾಲಯ /ಮಾನ್ಯ ಮುಖ್ಯ ಮಂತ್ರಿಗಳ ಸಚಿವಾಲಯ ಹಾಗೂ ಮಾನ್ಯ ಸಚಿವರ ಕಛೇರಿ ಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಗಳು.
21. ಹಿರಿಯ ಆರೋಗ್ಯ ಪರೀಕ್ಷಕರು/ ಭದ್ರತಾ ಅಧಿಕಾರಿಗಳು/ ಮೇಲ್ವಿಚಾರಕರು. ವಿಧಾನಸೌಧ/ ವಿಕಾಸಸೌಧ / ಬಹುಮಹಡಿ ಕಟ್ಟಡ.